SC:111/2021
PW:30 CW:47

ಕರ್ನಾಟಕ ಸರ್ಕಾರ (ಸಿ.ಆರ್.ಪಿ67)

| |
|---|
| ಹೇಳಿಕೆ ಹಾಳೆ<br>ಆರ್.ಪಿ. ಸಂಖ್ಯೆ57<br>ನಮೂನೆ ಸಂಖ್ಯೆ4<br>(ಸಿವಿಲ್) |

## 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ

## ಸತ್ರ ಪ್ರಕರಣ ಸಂಖ್ಯೆಃ 111/2021

| | |
|---|---|
| PW | 30 |
| CW | 47 |

**ಸಾಕ್ಷಿಯನ್ನು ಕರೆಯಿಸಿ ಸತ್ಯ ಬೋಧನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ** 28.02.2025.

| | | |
|---|---|---|
| ಸಾಕ್ಷಿಯ ಹೆಸರು | : | ಪ್ರಶಾಂತ್ ಜಿ.ಎನ್ |
| ತಂದೆಯ ಹೆಸರು | : | ನಂಜರೆಡ್ಡಿ |
| ವಯಸ್ಸು | : | 29 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಕಳೇಹಳ್ಳಿ ಗ್ರಾಮ, ಗುಡಿಬಂಡೆ ತಾಲ್ಲೂಕು |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

1. ಮೃತ ವಿಶ್ವನಾಥ್ ನನ್ನ ಮಾವ ಆಗಿರುತ್ತಾರೆ. ಚಾಸಾ-1 ರವರು ಮೃತ ವಿಶ್ವನಾಥ್ ಇವರ ಹೆಂಡತಿಯಾಗಿದ್ದು, ಚಾಸಾ-2 ನನ್ನ ಅಜ್ಜನಾಗಿದ್ದು, ಚಾಸಾ-26 ಅನುಸೂಯಮ್ಮನವರು ನನ್ನ ಅಜ್ಜಿಯಾಗಿದ್ದು, ಅವರು ಸುಮಾರು 2 ತಿಂಗಳ ಹಿಂದೆ ಮೃತಪಟ್ಟಿರುತ್ತಾರೆ. ಚಾಸಾ-49 ರವರು ನನ್ನ ಅತ್ತಿಗೆಯಾಗಿದ್ದು, ಉಳಿದ ಸಾಕ್ಷಿದಾರರ ಪರಿಚಯ ಇಲ್ಲ. ಈ ದಿನ ನ್ಯಾಯಾಲಯದ ಮುಂದೆ ವಿ ಸಿ ಮುಖಾಂತರ ಹಾಜರುಪಡಿಸಿದ

1 ಮತ್ತು 3 ನೇ ಆರೋಪಿ ಹಾಗೂ ಈ ದಿನ ನ್ಯಾಯಾಲಯದ ಮುಂದೆ ಹಾಜರಿರುವ 2 ಮತ್ತು 4 ನೇ ಆರೋಪಿತರನ್ನು ನಾನು ನೋಡಿರುವುದಿಲ್ಲ.

2. ಸಾಕ್ಷಿದಾರರು ನಿಪಿ–38 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–38(ಬಿ) ಎಂದು ಗುರುತಿಸಲಾಯಿತು. ನಿಪಿ–38 ಕ್ಕೆ ನಾನು ಸುಮಾರು 4 ವರ್ಷಗಳ ಹಿಂದೆ ಪೊಲೀಸ್ ಠಾಣೆಯಲ್ಲಿ ಮಧ್ಯಾಹ್ನ 3.00 ಗಂಟೆಗೆ ಸಹಿ ಮಾಡಿರುತ್ತೇನೆ. ಪೊಲೀಸರು ನನ್ನ ಮಾವನ ಕೊಲೆ ಆಗಿರುವುದಾಗಿ ಹೇಳಿ ನನ್ನ ಸಹಿ ಪಡೆದಿರುತ್ತಾರೆ. ಆ ಸಮಯದಲ್ಲಿ ಪೊಲೀಸರು ಮೃತ ವಿಶ್ವನಾಥ್ ಏನಾಗಬೇಕೆಂದು ನನ್ನನ್ನು ವಿಚಾರಿಸಿದ್ದು ಅದನ್ನು ಹೊರತುಪಡಿಸಿ ಬೇರೆ ಏನು ಮಾಡಿರುವುದಿಲ್ಲ.

3. ಸಾಕ್ಷಿದಾರರು ನಿಪಿ–38 ರಲ್ಲಿರುವ ಫೊಟೋವನ್ನು ನೋಡಿ ಅದರಲ್ಲಿ ನಾನು, ನನ್ನ ಮಾವನಾದ ನರಸಿಂಹರೆಡ್ಡಿ ಹಾಜರಿದ್ದು ನಮ್ಮ ಜೊತೆ ಇನ್ನಿಬ್ಬರು ಫೋಟೋದಲ್ಲಿ ಕಾಣುತ್ತಿದ್ದು ಅವರು ಯಾರು ಎಂದು ನನಗೆ ತಿಳಿದಿಲ್ಲ. ಸದರಿ ಫೋಟೋವನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ನನಗೆ ತಿಳಿದಿಲ್ಲ. ನಿಪಿ–38 ಕ್ಕೆ ನನ್ನ ಜೊತೆ ನನ್ನ ಮಾವ ನರಸಿಂಹರೆಡ್ಡಿ ಸಹಿ ಮಾಡಿದ್ದು ಬೇರೆ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ತಿಳಿದಿಲ್ಲ. ನಿಪಿ–38 ರಲ್ಲಿ ಏನು ವಿಚಾರ ಬರೆದಿರುತ್ತದೆ ಎಂದು ನನಗೆ ತಿಳಿದಿಲ್ಲ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>**

4. ದಿಃ 05.08.2021 ರಂದು ಸಂಜೆ 5.00 ಗಂಟೆಯಿಂದ 6.00 ಗಂಟೆ ಸಮಯದಲ್ಲಿ ಪೊಲೀಸರು ನನ್ನನ್ನು, ಚಾಸಾ–25 ಹಾಗೂ ಚಾಸಾ–46 ರವರನ್ನು ಚಿಕ್ಕಬಳ್ಳಾಪುರ ನಗರದಲ್ಲಿರುವ DCB/CEN ಪೊಲೀಸ್ ಠಾಣೆಗೆ ಕರೆಸಿ ಈ ಪ್ರಕರಣದಲ್ಲಿ ಜಪ್ತಿಪಡಿಸಿದ ಒಪ್ಪೋ ಮೊಬೈಲ್ ಫೋನ್, ಹಾನರ್ ಮೊಬೈಲ್ ಫೋನ್ ಹಾಗೂ ಸಾಮ್ಸಂಗ್ ನೋಟ್ 20 ಮೊಬೈಲ್ ನ ಎಕ್ಸಾಟ್ರಾಕ್ಷನ್ ಮಾಡಲು ಪ್ರಯತ್ನಿಸಿದ್ದು, ಅದು ಓಪನ್ ಆಗದೇ ಇದ್ದ ಕಾರಣ ನಮ್ಮ ಸಮಕ್ಷಮ ನಿಪಿ–38 ರಂತೆ ಮಹಜರ್ ಜರುಗಿಸಿ ಚಾಸಾ–25, ಚಾಸಾ–46 ಹಾಗೂ ನನ್ನ ಸಹಿಗಳನ್ನು ಪಡೆದಿರುತ್ತಾರೆ ಎಂದರೆ ಸರಿ. ನಿಪಿ–38 ಕ್ಕೆ ಪೊಲೀಸ್ ಅಧಿಕಾರಿಗಳೂ ಸಹ ಸಹಿ ಮಾಡಿರುತ್ತಾರೆ ಎಂದರೆ ಸರಿ.

**<u>ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಸಿ.ಡಿ. ವಕೀಲರಿಂದಃ</u>**

5. ನಿಪಿ–38 ಮಹಜರ್ ಗೆ ಬರುವಂತೆ ಪೊಲೀಸರು ನನಗೆ ನೋಟೀಸ್ ನೀಡಿದ್ದರು. ನಮ್ಮ ಊರಿನಿಂದ ಗೌರಿಬಿದನೂರು ನಗರ ಪೊಲೀಸ್ ಠಾಣೆ 40 ಕಿ.ಮೀ ದೂರದಲ್ಲಿ ಇರುತ್ತದೆ. ಪೊಲೀಸರು ನಮ್ಮ ಊರಿಗೆ ಬಂದು ನನಗೆ ನೋಟೀಸ್ ಜಾರಿ ಮಾಡಿದ್ದರು. ಸದರಿ ನೋಟೀಸ್ ಅನ್ನು ನನಗೆ 4 ದಿವಸಗಳ ಹಿಂದೆ ಜಾರಿಗೊಳಿಸಿದ್ದರು. ನನಗೆ ನೋಟೀಸ್ ಜಾರಿಗೊಳಿಸಿದ ನಂತರ ನಾನು ನೇರವಾಗಿ CEN ಪೊಲೀಸ್ ಠಾಣೆಗೆ ಬಂದಿದ್ದು ನನ್ನ ಜೊತೆ ಪೊಲೀಸ್ ಅಧಿಕಾರಿಗಳು ಹಾಗೂ ಉಳಿದ ಸಾಕ್ಷಿದಾರರು ಯಾರು ಬಂದಿರುವುದಿಲ್ಲ. ನಿಪಿ–38 ರಲ್ಲಿ ಏನು ವಿಚಾರ ಬರೆದಿರುತ್ತದೆ, ಯಾವ ಕಾರಣಕ್ಕಾಗಿ ಬರವಣಿಗೆ ಮಾಡಿರುತ್ತಾರೆ ಎಂದು ತಿಳಿದಿಲ್ಲ ಎಂದರೆ ಸರಿ. ನಿಪಿ–38 ಕ್ಕೆ ನನ್ನನ್ನು ಹೊರತು ಪಡಿಸಿ ಬೇರೆ ಯಾರು ಸಹಿ

ಮಾಡಿರುತ್ತಾರೆ ಎಂದರೆ ನಿಮಗೆ ತಿಳಿದಿಲ್ಲ ಎಂದರೆ ಸಾಕ್ಷಿಯು ನಮ್ಮ ಮಾವ ಸಹಿ ಹಾಕಿರುವುದಾಗಿ ನುಡಿದಿರುತ್ತಾರೆ.

6. ನಾನು ನಿಪಿ–38 ಕ್ಕೆ ಸಹಿ ಮಾಡುವ ಸಮಯದಲ್ಲಿ ಸಾಕಷ್ಟು ಜನ ಪೊಲೀಸರು ಇದ್ದರು. ನಿಪಿ–38 ರಲ್ಲಿ ಅಳವಡಿಸಿದ ಫೋಟೋವನ್ನು ಯಾರು ತೆಗೆದಿರುತ್ತಾರೆ ಎಂದು ಹೇಳಲು ನನಗೆ ಆಗುವುದಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ಮಹಜರ್ ಮಾಡಿ ಬರವಣಿಗೆ ಮಾಡದೇ ಇದ್ದರೂ ಸಹ ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ಪೊಲೀಸರು ಆ ಸಮಯದಲ್ಲಿ ಯಾವುದೇ ಫೋಟೋ ತೆಗೆದಿಲ್ಲ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 3 ನೇ ಆರೋಪಿ ಪರ ಶ್ರೀ ಜಿ.ಆರ್.ಹೆಚ್. ವಕೀಲರ ಪರವಾಗಿ ಶ್ರೀ ಜಿ.ಹೆಚ್.ಎಂ. ವಕೀಲರಿಂದಃ</u>**

7. ಚಿಕ್ಕಬಳ್ಳಾಪುರ ನಗರದಲ್ಲಿ ಕೃಷಿ ಮಾರುಕಟ್ಟೆಗೆ ಹೋಗುವ ರಸ್ತೆಯಲ್ಲಿ CEN ಪೊಲೀಸ್ ಠಾಣೆ ಇರುತ್ತದೆ.

ಶ್ರೀ ಜಿ.ಹೆಚ್.ಎಂ ವಕೀಲರು ಶ್ರೀ ಎ.ಸಿ.ಡಿ ವಕೀಲರ ಪಾಟೀಸವಾಲನ್ನು ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ.

**<u>2 ಮತ್ತು 4 ನೇ ಆರೋಪಿ ಪರಃ</u>** ಶ್ರೀ ಕೆ.ಎಸ್.ಎನ್. ವಕೀಲರನ್ನು ಕೂಗಿಸಿದ್ದು, ಗೈರುಹಾಜರಿದ್ದು  ಯಾರು ಪ್ರತಿನಿಧಿಸದೇ ಇರುವ ಕಾರಣ 2 ಮತ್ತು 4 ನೇ ಆರೋಪಿತರ ಪರ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರುವಿಚಾರಣೆಃ</u> ಇಲ್ಲ**
**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ದಿನಾಂಕ** 28.02.2025 **ರಂದು ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು** )

ಓದಿ ಹೇಳಿ ಕೇಳಿ ಸರಿ ಇದೆ

ಸಹಿ/–
**(ಎಸ್. ಶ್ರೀಧರ)**
ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.